## ಆಕರಗಳಿಗೆ ಅಪರಿಮಿತ ವೇದಿಕೆಗಳು

ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಆನ್‌ಲೈನ್ ಮೂಲಕ ಶಿಕ್ಷಣ ಮುಂದುವರಿಸಲು ಮಾನವ ಸಂಪನ್ಮೂಲ ಇಲಾಖೆಯ ವಿವಿಧ ಘಟಕಗಳಿಂದ ಅಭಿವೃದ್ಧಿಪಡಿಸಿದ ಆನ್‌ಲೈನ್ ವೇದಿಕೆಗಳನ್ನು ಬಳಸಲು ಸಲಹೆ ನೀಡಿದೆ. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಇವು ಉಪಯುಕ್ತ ಎನಿಸಿವೆ.

1. **SWAYAM:** ಸ್ವಯಂ ಆನ್‌ಲೈನ್ ಕೋರ್ಸ್‌ನಲ್ಲಿ ಬೋಧನೆ ಮತ್ತು ಕಲಿಕೆ ಎರಡಕ್ಕೂ ಬೇಕಾದ ಸಂಪನ್ಮೂಲಗಳು ಇವೆ. swayam.gov.inನಲ್ಲಿ ಹೆಸರು ನೋಂದಣಿ ಮಾಡಿಕೊಂಡು ಅದರಲ್ಲಿರುವ ಸಂಪನ್ಮೂಲಗಳನ್ನು ಯಾರು ಬೇಕಾದರೂ ಉಚಿತವಾಗಿ ಬಳಕೆಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
2. **e-PG Pathshala:** ಪಠ್ಯ ಆಧಾರಿತವಾದ ಸುಮಾರು 23 ಸಾವಿರ ಇ–ಕಂಟೆಂಟ್‌ಗಳು (ಇ–ಪಠ್ಯ ಮತ್ತು ವಿಡಿಯೊ ಸೇರಿ) ಇದರಲ್ಲಿವೆ. ಸ್ನಾತಕೋತ್ತರ ಪದವಿಗೆ ಸಂಬಂಧಿಸಿದ ವಿವಿಧ ವಿಷಯಗಳ ಅಧ್ಯಯನಕ್ಕೆ ಅಗತ್ಯವಾದ ಎಲ್ಲ ಆಕರ ಮಾಹಿತಿಯನ್ನು ಇದು ಹೊಂದಿದೆ.
3. **e-Content courseware:** ಪದವಿ ತರಗತಿಗಳ 87 ಕೋರ್ಸ್‌ಗಳಿಗೆ ಸಂಬಂಧಿಸಿದ ಪಠ್ಯಗಳ ಕುರಿತು ಈ ವೇದಿಕೆಯಲ್ಲಿ ಚರ್ಚಿಸಲಾಗಿದೆ. 24 ಸಾವಿರ ಇ–ಕಂಟೆಂಟ್‌ಗಳು ಇದರಲ್ಲಿವೆ. ವೆಬ್‌ಸೈಟ್ ವಿಳಾಸ: cec.nic.in/
4. **SWAYAMPRABHA:** 32 ಡಿಟಿಎಚ್ ಚಾನೆಲ್‌ಗಳ ಗುಚ್ಛವಿದು. ಶೈಕ್ಷಣಿಕ ಪಠ್ಯವನ್ನು ಆಧಾರಿಸಿ ಈ ಚಾನೆಲ್‌ಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಎಂಜಿನಿಯರಿಂಗ್, ಟೆಕ್ನಾಲಜಿ, ಮೆಡಿಸಿನ್ ಸೇರಿದಂತೆ ಶಿಕ್ಷಣದ ಎಲ್ಲ ಶಾಖೆಗಳಿಗೂ ಸಂಬಂಧಿಸಿದ ಕಾರ್ಯಕ್ರಮಗಳು ಈ ಚಾನೆಲ್‌ಗಳಲ್ಲಿ ಇರುತ್ತವೆ. ಕೇಬಲ್ ಆಪರೇಟರ್‌ಗಳ ಮೂಲಕ ಈ ಚಾನೆಲ್ ಸೇವೆಯನ್ನು ಪಡೆಯಬಹುದು. ಸಾಧ್ಯವಾಗದಿದ್ದರೆ ಪ್ರಸಾರವಾದ ಕಾರ್ಯಕ್ರಮಗಳ ವಿಡಿಯೊಗಳನ್ನು ಸ್ವಯಂಪ್ರಭಾ ವೆಬ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
5. **CEC-UGC YouTube channel:** ಶಿಕ್ಷಣದ ಎಲ್ಲ ಶಾಖೆಗಳಿಗೆ ಸಂಬಂಧಿಸಿದ ಪಾಠಗಳು ಈ ಯೂಟ್ಯೂಬ್‌ನಲ್ಲಿ ಲಭ್ಯವಿವೆ.
6. **National Digital Library:** ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯವು ಶೈಕ್ಷಣಿಕ ಪಠ್ಯಗಳ ದೊಡ್ಡ ಭಂಡಾರವಾಗಿದೆ. ಭಾರತದ ವಿವಿಧ ಭಾಷೆಗಳಲ್ಲೂ ಈ ಪಠ್ಯಗಳು ಲಭ್ಯವಿವೆ. ಯಾವುದೇ ಪಠ್ಯಕ್ಕೆ ಸಂಬಂಧಿಸಿದ ಆಕರ ಗ್ರಂಥಗಳನ್ನೂ ಇಲ್ಲಿ ಓದಬಹುದು.
7. **Shodhganga:** ಸುಮಾರು 2.60 ಲಕ್ಷ ಸಂಶೋಧನಾ ಪ್ರಬಂಧಗಳು ಈ ವೆಬ್‌ಸೈಟ್‌ನಲ್ಲಿವೆ.

## ಆನ್‌ಲೈನ್ ಕ್ಲಾಸ್‌ರೂಮ್!

ರಾಜ್ಯ ಸರ್ಕಾರ ಕೂಡ ಆನ್‌ಲೈನ್ ಶಿಕ್ಷಣದ ಕುರಿತು ಚಿಂತನೆ ಆರಂಭಿಸಿದಂತಿದೆ. ದಿಗ್ಬಂಧನದ ಪರಿಣಾಮ ಶಾಲೆಗಳಲ್ಲಿ ಬೋಧನೆ ನಿಲ್ಲಿಸಿದ ಬಳಿಕ ವಿದ್ಯಾರ್ಥಿಗಳನ್ನು ನೇರವಾಗಿ ತಲುಪಲು ಶಿಕ್ಷಣ ಇಲಾಖೆಯು ಈಗ ಯೂಟ್ಯೂಬ್ ಹಾದಿಯನ್ನು ಕಂಡುಕೊಂಡಿದೆ. ವಿದ್ಯಾರ್ಥಿಗಳ ಮನರಂಜನೆಗಾಗಿ 'ಮಕ್ಕಳ ವಾಣಿ, ನಲಿಯೋಣ ಕಲಿಯೋಣ' ಎಂಬ ಚಾನೆಲ್ ಆರಂಭಿಸಿದೆ. ಸುದೀರ್ಘ ಅವಧಿಯತನಕ ಶಾಲೆಯಿಂದ ದೂರವಿರುವ ವಿದ್ಯಾರ್ಥಿಗಳಿಗೆ ವಿಚಾರ ಪ್ರಚೋದಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಈ 'ಮಕ್ಕಳವಾಣಿ'ಯ ಗುರಿ ಎನ್ನುತ್ತಾರೆ ಶಿಕ್ಷಣ ಇಲಾಖೆಯ ಅಧಿಕಾರಿಗಳು. ಮನೆಯಲ್ಲಿ ಇರುವ ಮಕ್ಕಳನ್ನು ಕಥೆ, ಹಾಡು, ಸಂಗೀತ, ಕಿರು ನಾಟಕ, ಒಗಟು, ಗಾದೆ, ಮ್ಯಾಜಿಕ್, ಪದಬಂಧ ಮೊದಲಾದವುಗಳ ಮೂಲಕ ತಲುಪುವ ಪ್ರಯತ್ನ ಇದಾಗಿದೆ. 'ಮಕ್ಕಳ ವಾಣಿ'ಯಲ್ಲಿ ಬಳಸಲು ಉದ್ದೇಶಿಸಿರುವ ಕಾರ್ಯಕ್ರಮಗಳನ್ನು ರೇಡಿಯೊ, ಟಿವಿಗಳಲ್ಲಿಯೂ ಪ್ರಸಾರ ಮಾಡಲು ಅನುವಾಗುವಂತೆ ರೂಪಿಸಲಾಗಿದೆಯಂತೆ.

ಉನ್ನತ ಶಿಕ್ಷಣ ಇಲಾಖೆಯೂ 'ಸಾಮಾನ್ಯ ಪ್ರವೇಶ ಪರೀಕ್ಷೆ' (ಸಿಇಟಿ) ಹಾಗೂ 'ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ' (ಎನ್‌ಇಇಟಿ–ನೀಟ್) ಬರೆಯಲು ಸಿದ್ಧತೆ ನಡೆಸುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆ್ಯಪ್ ಆಧಾರಿತ 'ಗೆಟ್‌ಸೆಟ್‌ಗೊ' (GetCETGo) ಎಂಬ ಆನ್‌ಲೈನ್ ಮಾರ್ಗದರ್ಶನದ ವ್ಯವಸ್ಥೆ ಮಾಡಿದೆ. ಕೋಚಿಂಗ್ ಕ್ಲಾಸ್‌ಗಳಿಗೆ ಹೋಗಲಾಗದೆ ಸಂಕಷ್ಟಕ್ಕೆ ಸಿಲುಕಿದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಈ ಆನ್‌ಲೈನ್ ಕೋರ್ಸ್ ನೆರವಿಗೆ ಬಂದಿದೆ. 'ಕೆಸಿಇಟಿ' ಪರೀಕ್ಷೆಗೆ ಹೆಸರು ನೋಂದಾಯಿಸಿರುವ ಸುಮಾರು 1.94 ಲಕ್ಷ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಆ್ಯಪ್ ರೂಪಿಸಲಾಗಿದ್ದು, ಉಚಿತವಾಗಿ ಒದಗಿಸಲಾಗಿದೆ. ಸಿಂಚು ಇನ್ಫೋಟೆಕ್ ಮತ್ತು ದೀಕ್ಷಾ ಆನ್‌ಲೈನ್ ಸಂಸ್ಥೆಗಳು ಪರೀಕ್ಷೆಗೆ



ಮರವೇ ಪಾಠಶಾಲೆ: ಸ್ಮಾರ್ಟ್‌ಫೋನ್ ಇದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಸಂಪರ್ಕ ಸ್ಮಾರ್ಟ್ ಆಗಿರುವುದಿಲ್ಲ. ಅನೇಕ ಕಡೆಗಳಲ್ಲಿ ಮೊಬೈಲ್ ಸಿಗ್ನಲ್‌ಗಾಗಿ ಎತ್ತರದ ಪ್ರದೇಶಕ್ಕೆ ಹೋಗುವುದು ಅನಿವಾರ್ಯ. ಪಶ್ಚಿಮ ಬಂಗಾಳದ ಹಳ್ಳಿಯೊಂದರಲ್ಲಿ ಸುಬ್ರತಾ ಪತಿ ಎನ್ನುವ ಈ ಇತಿಹಾಸ ಶಿಕ್ಷಣ ಮಕ್ಕಳಿಗೆ ಆನ್‌ಲೈನ್ ಮೂಲಕ ಪಾಠ ಹೇಳಲಿಕ್ಕಾಗಿ ಮೊಬೈಲ್ ಸಿಗ್ನಲ್ ಹುಡುಕುತ್ತಾ ಬೇವಿನ ಮರವೇರಿದ್ದಾರೆ.